# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹಳಿಯಾಳ.

## ಸಿ.ಸಿ.ನಂಬರ. 314/2024

ಫಿರ್ಯಾದಿ : ಕರ್ನಾಟಕ ಸರಕಾರ
ದಾಂಡೇಲಿ ಗ್ರಾಮೀಣ ಪೋಲಿಸ ಠಾಣೆ, ದಾಂಡೇಲಿ.

ವಿರುದ್ಧ

ಆರೋಪಿತ : ಅರ್ಬಾಜ ತಂದೆ ಫಯಾಜ ಶರೀಫ,
ವಯಸ್ಸು : 26 ವರ್ಷ, ವೃತ್ತಿ : ಪೇಟಿಂಗ್ ಕೆಲಸ,
ಸಾಃ ನವಗ್ರಾಮ, ಗಾಂವಠಾಣ, ತಾಃ ದಾಂಡೇಲಿ.

**ಆಪಾದನೆ**

ದಿನಾಂಕ 26-02-2024 ರಂದು ಸಂಜೆ 06-30 ರ ಸಮಯದಲ್ಲಿ ದಾಂಡೇಲಿ ಗ್ರಾಮೀಣ ಪೊಲೀಸ ಠಾಣಾ ಸರಹದ್ದಿನ ಹಾಗೂ ಈ ನ್ಯಾಯಾಲಯದ ವ್ಯಾಪ್ತಿಗೆ ಬರುವ ದಾಂಡೇಲಿ ತಾಲೂಕಿನ ಗಾಂವಠಾಣ ಗ್ರಾಮದ ತಮ್ಮ ಮನೆಯಿಂದ ಪಿರ್ಯಾದಿಯು ಗಾಂವಠಾಣ ಗ್ರಾಮದ ತಮ್ಮ ತಾಯಿಯ ಮನೆಗೆ ಹೋಗುತ್ತಿರುವಾಗ ಆರೋಪಿಯಾದ ನೀನು ಪಿರ್ಯಾದಿಯ ಮನೆಯ ಮುಂದೆ ಅಡ್ಡಗಟ್ಟಿ ಅವರು ಹಕ್ಕುಳ್ಳ ದಿಕ್ಕಿನ ಕಡೆಗೆ ಸಾಗಲು ಅವಕಾಶ ಮಾಡಿಕೊಡದೇ ನಿಗ್ರಹಿಸುವ ಮೂಲಕ ನೀವು ಭಾ.ದಂ.ಸಂ.ಕಲಂ.341 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

ಕೊನೆಯದಾಗಿ, ಈ ಮೇಲೆ ಹೇಳಿದ ಅದೇ ದಿನಾಂಕ, ಸಮಯ, ಸಂದರ್ಭ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಪಿರ್ಯಾದಿಯನ್ನು ಉದ್ದೇಶಿಸಿ "ನಿನ್ನ ತಮ್ಮ ಪರಶುರಾಮನಿಗೆ ರಾತ್ರಿ ಕೊಲೆ ಮಾಡುತ್ತೇನೆ ನೀನು ಎನು ಮಾಡಿಕೊಳ್ಳುತ್ತೀಯಾ ಮಾಡಿಕೋ" ಎಂದು ಜೀವ ಬೇದರಿಕೆ ಹಾಕುವುದರ ಮೂಲಕ ನೀವು ಭಾ.ದಂ.ಸಂ.ಕಲಂ.506 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ .

ಪ್ರಶ್ನೆ 1 : ಈಗ ಓದಿ ಹೇಳಿದ ಆಪಾದನೆ ಸಾರಾಂಶ ನಿಮಗೆ ತಿಳಿಯಿತೇ ?

ಉತ್ತರ : ತಿಳಿಯಿತು.

ಪ್ರಶ್ನೆ 2 : ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುವಿಯಾ ಅಥವಾ ವಿಚಾರಣೆಯಾಗಬೇಕೆ ?

ಉತ್ತರ : ವಿಚಾರಣೆಯಾಗಬೇಕು.

ಸದರ ಅಪರಾಧಗಳು ನನ್ನ ಸಂಜ್ಞೆಯಲ್ಲಿ ಜರುಗುವುದರಿಂದ ವಿಚಾರಣೆಗೆ ಗುರಿಯಾಬೇಕೆಂದು ನಿರ್ದೇಶಿಸುತ್ತೇನೆ .

ಸ್ಥಳ : ಹಳಿಯಾಳ.

ದಿನಾಂಕ : **13-08-2024.** ಪ್ರ.ದ.ನ್ಯಾದಂ., ಹಳಿಯಾಳ.